**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.326/2023**

**PW-1 CW-3**

| | | |
|---|---|---|
| ಸಾಕ್ಷಿದಾರನ ಹೆಸರು | : | ರಮೇಶ ತಂದೆ ಮಲ್ಲರಡ್ಡೆಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಲದಕಲ್ |
| ಪ್ರಮಾಣಿಕರಿಸಿದ ದಿನಾಂಕ | : | 02-08-2024 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕ 25-01-2023 ರಂದು ಪೊಲೀಸರು ಮಂದಕಲ್‌ನ ಅಪರಾಧ ನಡೆದ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ 4-30 ಗಂಟೆಯವರೆಗೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಚಾಸಾ-1 ನನಗೆ ಸೊಸೆ ಆಗಬೇಕು. ಚಾಸಾ-4 ಮತ್ತು 5 ನನಗೆ ಅತ್ತೆ ಮಾವ ಆಗಬೇಕು. 2023 ನೇ ಇಸವಿ 2 ನೇ ತಿಂಗಳಿನಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ದಿನಾಂಕ 25-02-2023 ರಂದು ಪೊಲೀಸರು ಮಂದಕಲ್ ಗ್ರಾಮದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವಾಗ ಸ್ಥಳದಲ್ಲಿ 05 ಜನ ಸೇರಿದ್ದರು. 05 ಜನ ನಿಪಿ-1 ಕ್ಕೆ ಒಂದೊಂದು ಸಹಿ ಮಾಡಿರುತ್ತಾರೆ. ನಾನು ಸಹ ನಿಪಿ-1 ಕ್ಕೆ ಒಂದು ಸಹಿ ಮಾಡಿರುತ್ತೇನೆ. ನಾನು ಪಂಚನಾಮೆ ಮಾಡಿದ ಸ್ಥಳದಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆ ಬರೆದ ಬಿಳಿ ಹಾಳೆ ಇತ್ತು. ನಿಪಿ-1 ರಲ್ಲಿ ಬರೆದ ವಿಷಯ ಗೊತ್ತಿದೆ. ಘಟನಾ ಸ್ಥಳದ ಪೂರ್ವಕ್ಕೆ - ಶಿವಕಾಂತಸ್ವಾಮಿಯವರ ಜಮೀನು ಇದೆ, ಪಶ್ಚಿಮಕ್ಕೆ - ಶಿವರಾಜ ಪಾಟೀಲ್ ರವರ ಮನೆ ಇದೆ, ಉತ್ತರಕ್ಕೆ - ನಮ್ಮ ಮನೆ ಇದೆ ಮತ್ತ ದಕ್ಷಿಣಕ್ಕೆ - ರಸ್ತೆ ಹಾಗೂ ಸೋಮಶೇಖರ ರವರ ಮನೆ ಇದೆ. ಮೇಲೆ ಹೇಳಿದ ಚೆಕ್ಬಂದಿಯ ಜಾಗದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಸಂಬಂಧಿಕರು ಅಲ್ಲ. ಆರೋಪಿತರು ಮುಷ್ಠೂರು ಗ್ರಾಮದವರು ಆಗಿರುತ್ತಾರೆ. ನನ್ನದು ಕಾಕರಗಲ್ ಗ್ರಾಮ ಆಗಿರುತ್ತದೆ. ಕಾಕರಗಲ್‌ನಿಂದ ಮುಷ್ಠೂರು ಸುಮಾರು 7 ಕಿ.ಮೀ ದೂರ ಆಗುತ್ತದೆ. 1 ನೇ ಆರೋಪಿಯ ಮನೆಯವರು ಚಾಸಾ-1 ರವರನ್ನು 1 ನೇ ಆರೋಪಿಗೆ ಮದುವೆ ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದರು ಎಂದರೆ ನಿಜ.

ಚಾಸಾ-1 ರವರು 1 ನೇ ಆರೋಪಿಯ ತಂದೆಯ ಅಕ್ಕಳ ಮೊಮ್ಮಗಳು ಎಂದರೆ ನಿಜ. ಚಾಸಾ-1 ರವರ ತಂದೆ-ತಾಯಿ ಆರೋಪಿತರಿಗೆ ಸಂಬಂಧದಲ್ಲಿ ಹೆಣ್ಣನ್ನು ಕೊಡುವುದಿಲ್ಲ ಎಂದು ಹೇಳಿದ್ದರು ಎಂದರೆ ನಿಜ. 1 ನೇ ಆರೋಪಿ ಶರಣಗೌಡ ಕಂದಕೂರ ಎಮ್.ಎಲ್.ಎ ರವರ ಕಾರ್ ಚಾಲಕ ಎಂದರೆ ಗೊತ್ತಿಲ್ಲ. 2 ನೇ ಆರೋಪಿ ಕಾರ್ ಚಾಲಕನಾಗಿ ಪುನಾದಲ್ಲಿ ಸುಮಾರು ವರ್ಷಗಳಿಂದ ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ಬೀಗಸ್ತನದ ವಿಚಾರವಾಗಿ ಚಾಸಾ-1 ರವರ ತಂದೆ-ತಾಯಿ ಹಾಗೂ ಆರೋಪಿತರು ಪರಸ್ಪರ ಮಾತನಾಡುವುದಿಲ್ಲ ಎಂದರೆ ನಿಜ. ಯಾವುದೇ ಘಟನೆ ಆಗದೇ ಇದ್ದರೂ ಚಾಸಾ-1 ರವರು ನನಗೆ ಸೊಸೆಯಾಗಬೇಕು ಎಂದು ಪೊಲೀಸರು ಮಾಡಿದ ಸುಳ್ಳು ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.